# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 924 |
| ಸದಸ್ಯರ ಹೆಸರು | ಡಾ: ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 14-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೆಳೆದ ಸಾವಯವ ಮತ್ತು ಸಿರಿಧಾನ್ಯ ಹಾಗೂ ಅದರ ಉತ್ಪನ್ನವನ್ನು ಹೊರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆಯೇ: ರಫ್ತುಮಾಡುತ್ತಿರುವ ರಾಜ್ಯದಲ್ಲಿನ ಸಂಸ್ಥೆಗಳು ಯಾವುವು; | ಹೌದು, ರಾಜ್ಯದಲ್ಲಿ ಬೆಳೆದ ಸಾವಯವ ಮತ್ತು ಸಿರಿಧಾನ್ಯ ಹಾಗೂ ಅದರ ಉತ್ಪನ್ನಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ರಫ್ತು ಮಾಡುತ್ತಿರುವ ರಾಜ್ಯದಲ್ಲಿನ ರಫ್ತುದಾರ ಸಂಸ್ಥೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗೆ ಯಾವ ರೀತಿ ಪ್ರೋತ್ಸಾಹ ಸಹಾಯ, ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ; | ರಾಜ್ಯದಲ್ಲಿ ಸಿರಿಧಾನ್ಯಗಳ ಪ್ರದೇಶವನ್ನು ವಿಸ್ತರಿಸುವ ನಿಟ್ಟಿನಲ್ಲಿ 2019-20 ನೇ ಸಾಲಿನಿಂದ ಸಾಂಪ್ರದಾಯಿಕವಾಗಿ ಬೆಳೆಯುವ ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಬರಗು ಮತ್ತು ಊದಲು ಬೆಳೆಗಳನ್ನು ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.10000/-ಗಳಂತೆ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಪ್ರೋತ್ಸಾಹಧನ ನೀಡಲಾಗುತ್ತಿದೆ.<br><br>ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ. 10.00 ಲಕ್ಷಗಳ ವರೆಗೆ ಸಹಾಯಧನವನ್ನು ನೀಡುತ್ತಿದ್ದು ಆಸಕ್ತ ರೈತರು/ರೈತ ಗುಂಪುಗಳು/ರೈತ ಉತ್ಪಾದಕಾ ಗುಂಪುಗಳು/ ನವೋದ್ಯಮಿಗಳು/ ಸಾರ್ವಜನಿಕ ಉದ್ದಿಮೆಗಳು ಪ್ರಸ್ತಾವನೆ ಸಲ್ಲಿಸಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿರುತ್ತದೆ.<br><br>ಕೆಪೆಕ್ ಸಂಸ್ಥೆಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME) ಯೋಜನೆಯಡಿಯಲ್ಲಿ ಕಿರು ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ |

| | | |
|---|---|---|
| | | ಕೈಗೊಳ್ಳಲು ಅವಕಾಶವಿರುತ್ತದೆ. ಈ ಉದ್ದೇಶಕ್ಕಾಗಿ ಸದರಿ ಯೋಜನೆಯಡಿಯಲ್ಲಿ ಶೇಕಡ 35 ರಷ್ಟು (ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ಅನುಪಾತದಲ್ಲಿ) ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚುವರಿ ಶೇಕಡ 15 ರಷ್ಟು ಸಾಲ ಸಂಪರ್ಕಿತ ಸಹಾಯಧನವನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತಿದೆ (ಗರಿಷ್ಠ ಸಹಾಯಧನ ರೂ.15 ಲಕ್ಷ). |
| ಇ) | ಸಿರಿಧಾನ್ಯಕ್ಕೆ ಸರಿಯಾಗಿ ಮಾರುಕಟ್ಟೆ ದೊರೆತು ಲಾಭದಾಯಕ ಬೆಳೆಯಾಗಿದೆಯೇ; | ಹೌದು, ಸಿರಿಧಾನ್ಯಗಳು ಲಾಭದಾಯಕ ಬೆಳೆಯಾಗಿರುತ್ತವೆ. ಸಿರಿಧಾನ್ಯಗಳನ್ನು ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೆ ಒಳಪಡಿಸಿದ್ದಲ್ಲಿ ಉತ್ತಮ ಮಾರುಕಟ್ಟೆ ದೊರಕಲಿದೆ.<br>ಮುಂದುವರೆದು, ಸಾವಯವ ಮತ್ತು ಸಿರಿಧಾನ್ಯಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಒಳ್ಳೆಯ ಬೆಲೆ ದೊರೆಯುವಂತೆ ಮಾಡಲು ಸರ್ಕಾರ ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>➢ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಬೆಳೆಗಾರರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡುವ ನಿಟ್ಟಿನಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು 2016-17 ನೇ ಸಾಲಿನಲ್ಲಿ ರಾಜ್ಯಾದ್ಯಂತ ರಚಿಸಲಾಗಿರುತ್ತದೆ.<br>➢ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಪರ್ಕ ಒದಗಿಸಿಕೊಡುವ ನಿಟ್ಟಿನಲ್ಲಿ 2017 ರಲ್ಲಿ ರಾಷ್ಟ್ರ ಮಟ್ಟದ ಹಾಗೂ 2018, 2019, 2023, 2024 ಮತ್ತು 2025 ರಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳನ್ನು ಹಾಗೂ ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಮೇಳಗಳನ್ನು ಆಯೋಜಿಸಲಾಗಿರುತ್ತದೆ. |
| ಈ) | ಸಿರಿಧಾನ್ಯ ಬೆಳೆಯ ಹಬ್ಬನ್ನು ರಾಜ್ಯದಲ್ಲಿ ಎಲ್ಲೆಲ್ಲಿ ನಿರ್ಮಾಣ ಮಾಡಲಾಗಿದೆ; ಈ ಸಿರಿಧಾನ್ಯ ಬೆಳೆಯುವ ಹಬ್ಬನ್ನು ಸ್ಥಾಪಿಸುವ ಉದ್ದೇಶ ಹಾಗೂ ಗುರಿಗಳೇನು; | ➢ ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು ಇಲ್ಲಿ ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಸದರಿ ಕೇಂದ್ರವು ಸಿರಿಧಾನ್ಯಗಳನ್ನು ಬೆಳೆಯುವ ರೈತರು ಹಾಗೂ ಬಳಸುವ ಎಲ್ಲಾ ಪಾಲುದಾರರ ಲಾಭಕ್ಕಾಗಿ ತಂತ್ರಜ್ಞಾನಗಳ ಪ್ರದರ್ಶನ ಮತ್ತು ಸಾಮರ್ಥ್ಯಾಭಿವೃದ್ಧಿ ಉದ್ದೇಶದಿಂದ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಉತ್ಪನ್ನಗಳ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದೆ.<br>➢ ಉತ್ತಮ ಮತ್ತು ಗುಣಮಟ್ಟದ ಸಿರಿಧಾನ್ಯಗಳ ತಳಿಗಳ ಅಭಿವೃದ್ಧಿ, ಸಿರಿಧಾನ್ಯಗಳ ಉತ್ಪಾದನೆಯ ಕುರಿತಂತೆ ಪ್ರಚಾರ, ಸಿರಿಧಾನ್ಯಗಳಲ್ಲಿ ಉದ್ಯಮಶೀಲತೆಯ ಅಭಿವೃದ್ಧಿಯನ್ನು ಉತ್ತೇಜಿಸಲು ಕೃಷಿ ಉಪಕರಣಗಳು, |

| | | |
|---|---|---|
| | | ಅಸ್ತಿತ್ವದಲ್ಲಿರುವ ಯಂತ್ರೋಪಕರಣಗಳ ಪರಿಷ್ಕರಣೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು ಇಲ್ಲಿ "ಸಿರಿಧಾನ್ಯಗಳ ಮೌಲ್ಯ ಸರಪಳಿ ಉದ್ಯಾನ" ವನ್ನು ಸ್ಥಾಪಿಸಲಾಗುತ್ತಿದೆ.<br>➢ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪಾದಕರಿಗೆ, ಮಾರುಕಟ್ಟೆದಾರರಿಗೆ ಹಾಗೂ ಗ್ರಾಹಕರಿಗೆ ಅನುಕೂಲವಾಗುವಂತೆ ಮಾರುಕಟ್ಟೆ ಸಂಪರ್ಕವನ್ನು ವಿಸ್ತರಿಸಲು ಮತ್ತು ಆರೋಗ್ಯವನ್ನು ಸುಧಾರಿಸುವ ಉದ್ದೇಶದಿಂದ "ಸಾವಯವ ಮತ್ತು ಸಿರಿಧಾನ್ಯ ಹಬ್" ಅನ್ನು ಹೆಬ್ಬಾಳ, ಬೆಂಗಳೂರು ಇಲ್ಲಿ ಸ್ಥಾಪಿಸಲಾಗುತ್ತಿದೆ. ಮುಂದುವರೆದು, ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಉತ್ತಮ ಮಾನ್ಯತೆ, ಮಾರುಕಟ್ಟೆ ಸಂಪರ್ಕ ವಿಸ್ತರಣೆ, ರಫ್ತು ಉತ್ತೇಜನ, ಗ್ರಾಹಕರಿಗೆ ಅರಿವು ಮೂಡಿಸುವ ಹಾಗೂ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳನ್ನು ದೊರಕಿಸಿಕೊಡುವ ಗುರಿಯನ್ನು ಹೊಂದಿರುತ್ತದೆ |
| ಉ) | ಸಿರಿಧಾನ್ಯ ಬೆಳೆಗಾರರಿಗೆ ಎ.ಪಿ.ಎಂ.ಸಿ ಮೂಲಕ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆಯೇ? | ರಾಜ್ಯದಲ್ಲಿ 93 ವಿವಿಧ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣ ಕಕ್ಷೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ ಸಿರಿಧಾನ್ಯ ಉತ್ಪನ್ನಗಳು ಒಳಗೊಂಡಿರುತ್ತವೆ.<br><br>ರೈತರು ಬೆಳೆದಂತಹ ಮೇಲ್ಕಂಡ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣಗಳಲ್ಲಿ ನೇರ ಖರೀದಿ ಅಥವಾ ಟೆಂಡರ್ ಪದ್ದತಿ ಮೂಲಕ ಮಾರಾಟ ಮಾಡಲು ಅವಕಾಶ ಕಲ್ಪಿಸಿದೆ. |

ಸಂಖ್ಯೆ: AGRI/79/ACT/2025

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

ಅನುಬಂಧ

| Sr. No. | Name of the Promoter | Name of the Company | Contact | Email address |
|---|---|---|---|---|
| 1 | Mahesh.B. | ORGTREE | 8310095545 | nmanju@orgtree.in |
| 2 | Nagendra Kumar H | BILVA CARE | 9900067666 | contact@rajamudi.com |
| 3 | Surya Shastry | PHALADA AGRO RESEARCH FOUNDATIONS PVT. LTD., | 9448094194 / 9845508080 | surya@phaladaagro.com info@phaladaagro.com |
| 4 | Prasanna Venkat Katti | GAYATRI INDUSTRIES | 9845971769 | gayatriindustries2122@gmail.com |
| 5 | Dr Swarupa Rani | BASANI AGRO INNOVATIONS PVT LTD | 9177001188 | swarupareddy.basani@gmail.com |
| 6 | Chandrakant Sangur | BHOOSIRI MILLET FARMER PRODUCER CO. LTD., | 9945078458 | bhoosirimillets@gmail.com |
| 7 | Seshi Reddy K | SUBIKSHA ECO SOLUTIONS LLP | 8904454344 9845089462 | seshireddy.k@subikshaecosolutions.com |
| 8 | Radhakrishna I. | NIDHI FOOD PRODUCTS | 9611470575 | ittigundi@gmail.com |
| 9 | Dr.Mohan Kumar RK | DHATU ORGANICS AND NATURALS PVT. LTD., | 9845484733 9611287860 | info@dhatuorganics.com |
| 10 | Raj Kiran S.N. | RURAL GOOD | 9901981900 | rk@ruralgood.in |
| 11 | Dheeraj Pagariya | PAGARIYA FOOD PRODUCTS PVT. LTD., | 9844008757 | dheeraj@kwalityspices.com |
| 12 | Shilpa Mantagani | GAURISHNAKR FOOD INDUSTRIES | 9591947855 | gaurishankarindsgv@gmail.com |
| 13 | Manjunath.K. | JAY KESHAV EXPORTS PVT. LTD., | | mnk1970@gmail.com |
| 14 | Jagadish.B.S. | DESI VIVA FOODS LLP | 9740994002 | bsjagadish@desivivafoods.in |
| 15 | Girish Kasat | RAMAKRISHNA INDUSTRIES | 9058835294 | rgkmasa@gmail.com |
| 16 | Nagesh | SIRI DHANYA SPECIALITY FOODS | 9535168886 / 9902922155 | nagesh@siridhanya.com |
| 17 | Giri | URBAN MILLETS PVT. LTD,. | 7259111159 | vsgiri.bit@gmail.com |
| 18 | Srikanth | TWARIT TAYAR | 9448369716 | twarit.tayar@gmail.com |
| 19 | Sattya | FRESHON.IN | 8088080909 | eliteck solution@gmail.com |
| 20 | Shiv Kumar | PRAKRUTHI HEALTH PRODUCTS | 9343759758 | prakruthihealth@gmail.com |
| 21 | Uma R. Maheshwari | WE MANA | 9845120628 | uma@wemana.in |